ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು–01**

ಸಂಖ್ಯೆ: ಅ1/ಪ್ರಾ ಶಿ ವರ್ಗ 01/2019–20 ದಿನಾಂಕ: 19.09.2019

ಜ್ಞಾಪನ

ವಿಷಯ 2018–19ನೇ ಸಾಲಿನ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕ ವೃಂದದ ಅಂತರ ಘಟಕ (ವಿಭಾಗದ ಒಳಗೆ ಮತ್ತು ವಿಭಾಗದ ಹೊರಗಿನ ಸಮಗ್ರ ಪಟ್ಟಿಯಂತೆ) ವರ್ಗಾವಣಾ ಕೌನ್ಸಿಲಿಂಗ್‌ಗೆ ಕ್ರಮ ಸಂಖ್ಯೆವಾರು ಪರಿಷ್ಕೃತ ವೇಳಾಪಟ್ಟಿ ನಿಗದಿಪಡಿಸಿರುವ ಬಗ್ಗೆ.

ಉಲ್ಲೇಖ :1. ಈ ಕಛೇರಿ ಜ್ಞಾಪನ ಸಮ ಸಂಖ್ಯೆ, ವಿವಿಧ ದಿನಾಂಕಗಳು ಮತ್ತು ದಿನಾಂಕ:17.09.2019

***

ವಿಷಯದನ್ವಯ ದಿನಾಂಕ: 16.09.2019 ರಿಂದ ನಡೆಯುತ್ತಿರುವ ಪ್ರಾಥಮಿಕ ಶಾಲಾ ಶಿಕ್ಷಕರ ಘಟಕದ ಹೊರಗಿನ ವರ್ಗಾವಣೆಗಳನ್ನು ಉಲ್ಲೇಖಿತ ದಿನಾಂಕ:17.09.2019ರ ಜ್ಞಾಪನದಲ್ಲಿ ಕ್ರಮಸಂಖ್ಯೆವಾರು ಅಭ್ಯರ್ಥಿಗಳಿಗೆ ಕೌನ್ಸಿಲಿಂಗ್ ನಿಗದಿಪಡಿಸಲಾಗಿತ್ತು.

ಆದರೆ ತಾಂತ್ರಿಕ ಅಡಚಣೆಯಿಂದ ನಿಗಧಿತ ವೇಳಾಪಟ್ಟಿಯಂತೆ ಕೌನ್ಸಿಲಿಂಗ್ ಕ್ರಮಗಳನ್ನು ಕೈಗೊಳ್ಳಲು ಸಾಧ್ಯವಾಗುತ್ತಿಲ್ಲವಾದ್ದರಿಂದ ಈ ಕೆಳಗಿನ ಪುನರ್ ಪರಿಷ್ಕೃತ ವೇಳಾಪಟ್ಟಿಯಂತೆ ಶಿಕ್ಷಕರು ಕೌನ್ಸಿಲಿಂಗ್‌ಗೆ ಹಾಜರಾಗಲು ತಿಳಿಸಿದೆ. ಸಂಬಂಧಿಸಿದ ಪ್ರಾಧಿಕಾರಿಗಳು ಈ ಕುರಿತು ಅಗತ್ಯ ಕ್ರಮವಹಿಸಲು ತಿಳಿಸಿದೆ.

ಅನಿವಾರ್ಯ ಕಾರಣಗಳಿಂದ ಕ್ರಮಸಂಖ್ಯೆವಾರು ಕೌನ್ಸಿಲಿಂಗ್ ಪ್ರಕ್ರಿಯೆ ಆಯಾ ದಿನಾಂಕಗಳಂದು ಪೂರ್ಣಗೊಳ್ಳದಿದ್ದಲ್ಲಿ, ಬದಲಾದ ದಿನಾಂಕಗಳನ್ನು ತಕ್ಷಣ ಪ್ರಕಟಿಸಲಾಗುವುದು.

| ಕ್ರಮ ಸಂಖ್ಯೆ | ದಿನಾಂಕ | ಸಮಯ | ಅಂತಿಮ ಆಧ್ಯತಾ ಪಟ್ಟಿಯಲ್ಲಿರುವ ಕ್ರಮ ಸಂಖ್ಯೆಗಳಂತೆ |
|---|---|---|---|
| 3 | 19.09.2019 | ಬೆಳಿಗ್ಗೆ 9 ರಿಂದ | 751 ರಿಂದ 1000ರ ವರೆಗಿನ ಪ್ರಾಥಮಿಕ ಶಾಲಾ ಸಹ ಶಿಕ್ಷಕರು (ನಾಲ್ಕು ವಿಭಾಗಗಳು ಸೇರಿ) |
| 4 | 20.09.2019 | ಬೆಳಿಗ್ಗೆ 9 ರಿಂದ | 1001 ರಿಂದ 1250ರ ವರೆಗಿನ ಪ್ರಾಥಮಿಕ ಶಾಲಾ ಸಹ ಶಿಕ್ಷಕರು (ನಾಲ್ಕು ವಿಭಾಗಗಳು ಸೇರಿ) |
| 5 | 21.09.2019 | ಬೆಳಿಗ್ಗೆ 9 ರಿಂದ | 1251 ರಿಂದ 1500ರ ವರೆಗಿನ ಪ್ರಾಥಮಿಕ ಶಾಲಾ ಸಹ ಶಿಕ್ಷಕರು (ನಾಲ್ಕು ವಿಭಾಗಗಳು ಸೇರಿ) |
| ಕ್ರಮ ಸಂಖ್ಯೆ 1500ರಿಂದ 11340ರಲ್ಲಿನ ಶಿಕ್ಷಕರುಗಳಿಗೆ ಕೌನ್ಸಿಲಿಂಗ್ ದಿನಾಂಕಗಳನ್ನು ಮುಂದಿನ ದಿನಗಳಲ್ಲಿ ಪ್ರಕಟಿಸಲಾಗಿವುದು. | | | |

ನಿರ್ದೇಶಕರು(ಪ್ರಾಥಮಿಕ ಶಿಕ್ಷಣ)

ಗೆ,

ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಸಹನಿರ್ದೇಶಕರು ಹಾಗೂ ಪದನಿಮಿತ್ತ ವಿಭಾಗೀಯ ಕಾರ್ಯದರ್ಶಿಗಳು.

ಪ್ರತಿ

1. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗ/ಧಾರವಾಡ.
2. ರಾಜ್ಯದ ಎಲ್ಲಾ ಉಪನಿರ್ದೇಶಕರು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ ಅಗತ್ಯ ಕ್ರಮಕ್ಕಾಗಿ.
3. ಹಿರಿಯ ಸಹಾಯಕ ನಿರ್ದೇಶಕರು, ಇ–ಆಡಳಿತ ವಿಭಾಗ, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ವೇಳಾಪಟ್ಟಿಯಂತೆ ಅಗತ್ಯ ಕ್ರಮ ಕೈಗೊಳ್ಳಲು ಹಾಗೂ ಇಲಾಖಾ ವೆಬ್–ಸೈಟ್‌ನಲ್ಲಿ ಪ್ರಕಟಿಸಲು